


## ಗುರೂಜಿ ಕೃಷ್ಣಾನಂದ (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ. ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18–05–2008ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಎದ್ದಾಗ ಮತ್ತು ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ಕೊಡುಗೆಯನ್ನು ಕೊಡಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

# ಬೆಳಕಿನ ಸಂಚಲನ

ಸಂಪುಟ 8, ಸಂಚಿಕೆ 6 | ದ್ವೈಮಾಸಿಕ ವಾರ್ತಾಪತ್ರ | ನವೆಂಬರ್–ಡಿಸೆಂಬರ್ 2020

## ಒಂದು ಸಂದೇಶ

### ಗುರೂಜಿ ಕೃಷ್ಣಾನಂದ

(ಗುರೂಜಿಯವರು ಏಪ್ರಿಲ್ 6, 2003ರಂದು ಮಾಡಿದ ಭಾಷಣದ ಆಯ್ದ ಭಾಗಗಳು)

**ಅನು: ಕಾಂಚನಲತಾ**

"ನಾನು ಇರುವುದೇ ಹೀಗೆ, ನಾನು ಬದಲಾಗಲಾರೆ. ನಾನು ಈ ರೀತಿ ಇರುವುದು ತಪ್ಪು ಎಂದು ನನಗೆ ಗೊತ್ತಿದೆ, ಆದರೆ ನಾನು ಅಸಹಾಯಕ," ಎಂದು ಕೆಲವೊಮ್ಮೆ ನಾವು ಹೇಳುತ್ತೇವೆ. ನಾನು ಅಂತಹ ಅನೇಕ ಹೇಳಿಕೆಗಳನ್ನು ಕೇಳಿದ್ದೇನೆ. ವಿಷಯವೇನೆಂದರೆ, ನಾವು ಮನಸ್ಸು ಮಾಡಿದರೆ, ಯಾವಾಗ ಬೇಕಾದರೂ ಬದಲಾಗಬಹುದು. ಅದು ಸುಲಭವಲ್ಲ ಎಂಬುದನ್ನು ನಾನು ಒಪ್ಪುತ್ತೇನೆ, ಆದರೆ ನಾವು ಪ್ರಯತ್ನ ಮಾಡಿದರೆ ಮತ್ತು ಪ್ರಯತ್ನ ಮಾಡುವುದನ್ನು ಮುಂದುವರೆಸಿದರೆ, ಅದು ಸಾಧ್ಯ. ಇದೇ ಸಾಧನೆಯ ಗುಟ್ಟು. ಕೇವಲ ಒಂದು ಬಾರಿ ಧ್ಯಾನ ಮಾಡುವುದಲ್ಲ, ಕೇವಲ ಒಂದು ಬಾರಿ ಮಾತ್ರ ಪ್ರಯತ್ನ ಮಾಡುವುದಲ್ಲ; ಅದನ್ನು ಮುಂದುವರೆಸುತ್ತಾ ಹೋಗಬೇಕು. ವೈಫಲ್ಯಗಳಾದರೂ ಪ್ರಯತ್ನಿಸುವುದನ್ನು ಬಿಡಬಾರದು. ಅದೇ ಸಾಧನೆ. ನಾವು ಬದಲಾಗಬಹುದು, ನಮ್ಮ ಜೀವನವನ್ನು ಬದಲಿಸಿಕೊಳ್ಳಬಹುದು, ನಮ್ಮ ವಿಧಿಯನ್ನು ಬದಲಿಸಬಹುದು. "ಇದನ್ನು ಮಾಡು. ಅದನ್ನು ಮಾಡಬೇಡ" ಎಂದು ಸದಾ ಹೇಳುವ ಇನ್ನೊಂದು ವ್ಯಕ್ತಿ ನಮ್ಮೊಳಗಿರುವುದರ ಅನುಭವ ನಮಗೆಲ್ಲರಿಗೂ ಆಗಿರಬಹುದು. ನಿಮಗೆ ಧ್ಯಾನ ಮಾಡಬೇಕೆನಿಸಿದರೆ, "ಆಮೇಲೆ ಮಾಡು" ಎಂದು ಆತ ಹೇಳುತ್ತಾನೆ. ಆ ವ್ಯಕ್ತಿಯು, ಹೇಗೋ ಸದಾ ನಮ್ಮನ್ನು ದೂರ ಕೊಂಡೊಯ್ಯುತ್ತಾನೆ, ಈ ಆಧ್ಯಾತ್ಮ ಮಾರ್ಗದಿಂದ ದೂರ ಕೊಂಡೊಯ್ಯುತ್ತಾನೆ. ಆ ವ್ಯಕ್ತಿ ಯಾರು? ಯಾವುದೋ ಅಪರಿಚಿತ ವ್ಯಕ್ತಿ ನಮ್ಮಲ್ಲಿ ಇರುವ ಹಾಗಲ್ಲ, ಆ ವ್ಯಕ್ತಿತ್ವ ನಮ್ಮ ಅಹಂ ಆಗಿದೆ. ನಾವು ಒಮ್ಮೆ ಈ ನಕಾರಾತ್ಮಕ ಅಹಂಅನ್ನು ಗುರುತಿಸಿದರೆ, ಅದನ್ನು ನಿರ್ಲಕ್ಷಿಸಲಾರಂಭಿಸಲು ಸುಲಭವಾಗುತ್ತದೆ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಕಾಂಚನಲತಾ**

ಇತ್ತೀಚೆಗೆ ಮುಂಬಯಿಯ ಸಾಂಸ್ಕೃತಿಕ ತಂಡವೊಂದು, ನಮ್ಮ ಕಾರ್ಯಕರ್ತೆಯೊಬ್ಬರಿಗೆ, ಪ್ರಶಸ್ತಿ ನೀಡುವ ಮೂಲಕ ಆಕೆಯ ಸಾಧನೆಗಳನ್ನು ಗುರುತಿಸಿದ್ದಾರೆ. ನಮ್ಮ ಕಾರ್ಯಕರ್ತೆಯು ಆ ಪ್ರಶಸ್ತಿಯನ್ನು ಸ್ವೀಕರಿಸಲು ಇಷ್ಟಪಡಲಿಲ್ಲ, ಏಕೆಂದರೆ, ತಾನೊಬ್ಬಳೇ ಆ ಪ್ರಶಸ್ತಿಯನ್ನು ಪಡೆಯಲು ಅರ್ಹಳಲ್ಲ ಎಂದು ಆಕೆಗೆ ಅನಿಸಿತು. ಆದರೆ, ಆಕೆಯ ಸ್ನೇಹಿತರು ವಿನಂತಿ ಮಾಡಿಕೊಂಡಿದ್ದರಿಂದ, ಅವರನ್ನು ನೋಯಿಸಲು ಇಷ್ಟವಿಲ್ಲದೇ, ಅದನ್ನು ಸ್ವೀಕರಿಸಿದರು. ಆ ಪ್ರಶಸ್ತಿಯನ್ನು ಗುರೂಜಿಯವರಿಗೆ ಹಾಗೂ ಲೈಟ್ ಚಾನಲಿಂಗ್‌ನ ಸಮಸ್ತ ತಂಡಕ್ಕೆ ಸಮರ್ಪಿಸಿದರು. ಗುರೂಜಿಯವರು ಈ ಕೆಲಸದಲ್ಲಿ ತೊಡಗಿರುವ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಅಂತಹ ನಮ್ರತೆಯನ್ನು ಆಳವಾಗಿ ಬೇರೂರಿಸಿದ್ದಾರೆ.

ನಮ್ಮ ಸಾಧನೆಗಳನ್ನು ಗುರುತಿಸಿದ ಆ ಸಾಂಸ್ಕೃತಿಕ ತಂಡದ ಬಗ್ಗೆ ಸಂತಸವಾಗುತ್ತದೆ. ಇದು, ಕೇವಲ ಒಬ್ಬ ವ್ಯಕ್ತಿಯದ್ದಲ್ಲ, ಇಡೀ ತಂಡದ ಸಾಧನೆಯನ್ನು ವಿಶ್ವ ಮತ್ತು ಬೆಳಕು ಗುರುತಿಸಿದ ಹಾಗಿದೆ. "ಬೆಳಕು ಲಕ್ಷಗಟ್ಟಲೆ ಚಾನಲ್‌ಗಳನ್ನು ಹೊಂದಿದೆ". ಅದು ಸಂವಾದ ನಡೆಸಬಲ್ಲದು, ಪ್ರೋತ್ಸಾಹಿಸಬಲ್ಲದು ಹಾಗೂ ತನ್ನ ಅನುಗ್ರಹವನ್ನು ಒಬ್ಬರ ಮೂಲಕ ಅಥವಾ ತನ್ನ ಅನೇಕ ಚಾನಲ್‌ಗಳ ಮೂಲಕ ಸುರಿಸಬಲ್ಲದು, ಎಂದು ಗುರೂಜಿ ಕೃಷ್ಣಾನಂದರವರು ಯಾವಾಗಲೂ ಹೇಳುತ್ತಿದ್ದರು.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಸುಧಾಕರ್**

ಗುರೂಜಿ ಕೃಷ್ಣಾನಂದರವರು ನಿಜವಾದ ಆಧ್ಯಾತ್ಮಿಕ ಮಾಸ್ಟರ್ ಆಗಿದ್ದರು. ಅವರು ತಮ್ಮ ಪುಸ್ತಕಗಳು ಮತ್ತು ಭಾಷಣಗಳ ಮೂಲಕ ಅಪಾರವಾದ ಜ್ಞಾನ ಮತ್ತು ವಿವೇಕವನ್ನು ಕೆಳತಂದಿದ್ದಾರೆ. ಅವರ ಬೋಧನೆಗಳು ಪ್ರಸ್ತುತ ವಿದ್ಯಮಾನಗಳಿಗೆ ಅತ್ಯಂತ ಸೂಕ್ತವಾಗಿವೆ. ಇನ್ನೆಂದಿಗಿಂತಲೂ ಈಗ ಅವರ ಭೌತಿಕ ಉಪಸ್ಥಿತಿಯ ಅವಶ್ಯಕತೆ ಕಾಣಿಸುತ್ತಿದೆ. ನವೆಂಬರ್ 23ರಂದು ಅವರ 9ನೇ ಮಹಾಸಮಾಧಿಯನ್ನು ಆಚರಿಸುತ್ತಿದ್ದೇವೆ ಹಾಗೂ ಅವರ ಮಾರ್ಗದರ್ಶನವನ್ನು ಕೋರುತ್ತಿದ್ದೇವೆ.

ಇತ್ತೀಚೆಗೆ, ಆನ್‌ಲೈನ್ ಲೈಟ್ ಚಾನಲಿಂಗ್ ಸೆಷನ್‌ಗಳಿಗಾಗಿ, ಒಂದೆರಡು ಶಾಲಾ ಅಧಿಕಾರಿಗಳಿಂದ ಕೋರಿಕೆಗಳು ಬಂದಿದ್ದವು. ನಮ್ಮ ಕಾರ್ಯಕರ್ತರು ಆ ಅವಕಾಶವನ್ನು ಬಳಸಿಕೊಂಡು, ಸೆಷನ್‌ಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ನಮ್ಮ ಕಾರ್ಯಕರ್ತರ ಈ ಪ್ರಯತ್ನವು, ವಿದ್ಯಾರ್ಥಿಗಳ ಕಲಿಕೆಯ ಅನುಭವವನ್ನು ಹೆಚ್ಚಿಸಿತು. ಸೆಷನ್‌ಗಳು ಪ್ರೀತಿ ಮತ್ತು ಸಂತೋಷಗಳಿಂದ ತುಂಬಿದ್ದವು. ಮಕ್ಕಳು ಚೆನ್ನಾಗಿ ಗ್ರಹಿಸುತ್ತಿದ್ದುದು ನಮ್ಮ ಕಾರ್ಯಕರ್ತರಿಗೆ ಕಂಡುಬಂತು, ಅವರು ಅನೇಕ ಪ್ರಶ್ನೆಗಳನ್ನು ಕೇಳಿದರು ಮತ್ತು ಸುಂದರ ಅನುಭವಗಳನ್ನು ಹಂಚಿಕೊಂಡರು. ಬೆಳಕನ್ನು ಹರಡುವ ಅವಕಾಶಗಳು ಇನ್ನೂ ಹೆಚ್ಚಾಗಿ ಸಿಗಲಿ ಎಂದು ನಾವು ಆಶಿಸುತ್ತೇವೆ.

**ಮಾನಸ ಫೌಂಡೇಷನ್ (ರಿ)**

ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು – 560077. ಭಾರತ

ಫೋನ್: 9900075280 (10AM to 5PM) ಇ–ಮೇಲ್: info@lightagemasters.com

ವೆಬ್ ಸೈಟ್: www.lightagemasters.com; www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

**ಸರ್ಕಾರದ ಮಾರ್ಗದರ್ಶನದಂತೆ, ಸರ್ವವ್ಯಾಪಿ ವ್ಯಾಧಿಯನ್ನು ನಿಲ್ಲಿಸಲು ಎಲ್ಲಾ ಸಭೆಗಳನ್ನು ರದ್ದುಪಡಿಸಬೇಕಾಗಿರುವುದರಿಂದ, ನಮ್ಮ ಎಲ್ಲಾ ಕೇಂದ್ರಗಳಲ್ಲಿ ಲೈಟ್ ಚಾನಲಿಂಗ್ ಸೆಷನ್‌ಗಳನ್ನು ಮುಂದಿನ ಸೂಚನೆ ಬರುವವರೆಗೆ ರದ್ದು ಪಡಿಸಲಾಗಿದೆ.**

**ಬೆಂಗಳೂರು**

**ಪ್ರತಿ ದಿನ (ಸಂಜೆ 7 – 7.15)**
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ
ಮಲ್ಲೇಶ್ವರಂ
ದೂ. 9084121545 ಶ್ರೀ ಚಂದ್ರಶೇಖರ್


**ಸೋಮವಾರ (ಸಂಜೆ 6.30 –7)**
ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆ
ದೂ. 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಬುಧವಾರ (ಸಂಜೆ 6.30 – 7)**
ಮಾರುತಿ ಮಂದಿರ, ವಿಜಯನಗರ
ದೂ. 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಶುಕ್ರವಾರ (ಸಂಜೆ 6.30 – 7)**
ನಂ. 39, ಒಂದನೇ ಮಹಡಿ, 6ನೇ ಅಡ್ಡರಸ್ತೆ
ಎಲ್ ಐ ಸಿ ಕಾಲೋನಿ, 3ನೇ ಬ್ಲಾಕ್
ಪೂರ್ವ ಜಯನಗರ
ದೂ. 7022621407 ಶ್ರೀ ರಮೇಶ್ ವಿ ಭೋಸೆಕರ್

**ಶುಕ್ರವಾರ** (ಮಧ್ಯಾಹ್ನ 12.00)
ಸಿದ್ಧಿವಿನಾಯಕ ದೇವಸ್ಥಾನ, 59/1, ಹಚಿನ್ಸ್ ರಸ್ತೆ,
3ನೇ ಅಡ್ಡರಸ್ತೆ, ಕೂಕ್ ಟೌನ್
ದೂ. 9980205803 ಶ್ರೀಮತಿ ನಿರ್ಮಲ ಬಾಲ

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ–ಮೇಲ್ info@lightagemasters.com ಗೆ ಬರೆಯಿರಿ.



ದೇಶದ ವಿವಿಧ ರಾಜ್ಯಗಳಲ್ಲಿ ನೆಲೆಸಿರುವ, ಮಧುರೆಯ ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಅಕ್ಟೋಬರ್ 9 ರಂದು ಆನ್‌ಲೈನ್ ಮೂಲಕ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಭಾಗವಹಿಸಿ, ಲೈಟ್ ಚಾನಲ್ ಮಾಡಿದರು.

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ಪ್ರಪಂಚದ ಯಾವುದೇ ಭಾಗದಲ್ಲಿ ನೋವು ಮತ್ತು ಕಷ್ಟಗಳಿದ್ದಾಗಲೆಲ್ಲಾ ಅದು ನಮ್ಮನ್ನೂ ತಟ್ಟುತ್ತದೆ. ನಾವು ಅಸಹಾಯಕರು. ನಾವದನ್ನು ಪಡೆದುಕೊಂಡು ನಮ್ಮದೇ ಆದ ರೀತಿಯಲ್ಲಿ ಅದನ್ನು ತೊಡೆದು ಹಾಕಬೇಕು. ಹಾಗೂ ಸಾಧ್ಯವಾದರೆ, ಧ್ಯಾನದ ಮೂಲಕ ಈ ಪ್ರಪಂಚಕ್ಕೆ ಪ್ರೀತಿ ಮತ್ತು ಶಾಂತಿಯ ತರಂಗಗಳನ್ನು ಸೇರಿಸಬೇಕು. ಆದ್ದರಿಂದಲೇ ಎಷ್ಟು ಗಂಟೆಗಳು ಧ್ಯಾನ ಮಾಡಿದರೂ ಅದು ಸಾಕಾಗುವುದಿಲ್ಲ.
- ಧ್ಯಾನವು ನಮ್ಮನ್ನು ವಿನೀತರನ್ನಾಗಿಸುತ್ತದೆ. ನಮ್ರತೆ ಆಧ್ಯಾತ್ಮಿಕ ಪ್ರಗತಿಯನ್ನು ಸೂಚಿಸುತ್ತದೆ.
- ನಮ್ಮಲ್ಲಿ ಕರುಣೆಯಿರಬೇಕು. ನಮಗಾಗಿ ಮಾತ್ರವಲ್ಲ, ಇತರಿಗಾಗಿ ಕೂಡ. ಕರುಣೆ ಪ್ರೀತಿಯ ಒಂದು ಕಾರ್ಯ.
- ನಾವು ಪ್ರಾಮಾಣಿಕರಾಗಿರಬೇಕು. ಇಬ್ಬಗೆತನ ಇರಲೇಬಾರದು. ನಮ್ಮ ಸಾಧನೆಯನ್ನು ಅತ್ಯಂತ ಪ್ರಾಮಾಣಿಕವಾಗಿ ಮಾಡಬೇಕು. ನಮ್ಮ ಎಲ್ಲ ಮಾತು, ಭಾವನೆ ಮತ್ತು ಕಾರ್ಯಗಳಲ್ಲಿ ಪ್ರಾಮಾಣಿಕತೆಯಿರಬೇಕು.
- ನಾವು ಇನ್ನೊಂದು ಆತ್ಮವನ್ನು ಗೌರವಿಸಿದಾಗ ದೇವರನ್ನೇ ಗೌರವಿಸುತ್ತಿರುತ್ತೇವೆ. ನಾವು ಇನ್ನೊಬ್ಬರನ್ನು ಅಪಮಾನಿಸಿದರೆ ದೇವರನ್ನೇ ಅಪಮಾನಿಸುತ್ತಿರುತ್ತೇವೆ.
- ಪ್ರಕೃತಿಯು ಯಾವಾಗಲೂ ಪ್ರೀತಿ ಮತ್ತು ಶಾಂತಿಯ ತರಂಗಗಳನ್ನು ಹೊರಹೊಮ್ಮಿಸುತ್ತಿರುತ್ತದೆ. ನಾವು ಪ್ರಕೃತಿಯೊಂದಿಗೆ ಸಮಯ ಕಳೆದರೆ, ನಮ್ಮ ಪ್ರಯತ್ನವೇ ಇಲ್ಲದೆ ಶಾಂತಿಯನ್ನು ಅನುಭವಿಸುತ್ತೇವೆ, ನಮ್ಮ ಮನಸ್ಸಿನ ಖಿನ್ನತೆಯಿಂದ ಹೊರಬರುತ್ತೇವೆ.
- ನಾವು ಧ್ಯಾನ ಮಾಡಲಾರಂಭಿಸಿದಾಗ, ಅದರ ಪರಿಣಾಮವನ್ನು, ಪ್ರಭಾವವನ್ನು ನಮ್ಮ ಪರಿಸರದಲ್ಲಿ ಕೂಡಾ ನೋಡಬಹುದು. ನಾವು ಧ್ಯಾನ ಮಾಡುವ ಸ್ಥಳದಲ್ಲಿ ಶಾಂತಿಯ ಅನುಭವವಾಗುತ್ತದೆ, ಅದು ನಮಗಷ್ಟೇ ಅಲ್ಲ, ಅಲ್ಲಿಗೆ ಯಾರಾದರೂ ಬಂದರೆ ಅವರಿಗೂ ಅನುಭವವಾಗುತ್ತದೆ. ನಮ್ಮ ಕೋಣೆಗೆ ಯಾರೇ ಬಂದರೂ, ನಮ್ಮ ಹತ್ತಿರಕ್ಕೆ ಯಾರೇ ಬಂದರೂ, ಈ ಅಪೂರ್ವ ಶಾಂತಿ ಮತ್ತು ಪ್ರಶಾಂತತೆಯನ್ನು ಅನುಭವಿಸುತ್ತಾರೆ.

–ಗುರೂಜಿ ಕೃಷ್ಣಾನಂದ

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 5835 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 29.87 ಲಕ್ಷ |

## ಮನವಿ

**ಈ ಸಂಕಷ್ಟದ ಸಮಯದಲ್ಲಿ ಮಾನವಕುಲಕ್ಕೆ ಸಹಾಯ ಮಾಡುವಂತೆ ವಿಶ್ವಕ್ಕೆ ವಿಶೇಷ ಪ್ರಾರ್ಥನೆ ಸಲ್ಲಿಸಲು, ಪ್ರತಿ ದಿನ ಮಧ್ಯಾಹ್ನ 12ರಿಂದ 12.30 ವರಗೆ ನಿಮ್ಮ ನಿಮ್ಮ ಮನೆಗಳಿಂದಲೇ ಲೈಟ್ ಚಾನಲ್ ಮಾಡುವುದರ ಮೂಲಕ ನಮ್ಮ ಜೊತೆ ಸೇರಬೇಕೆಂದು ಕೋರುತ್ತೇವೆ.**

## ಬೆಳಕಿನ ಕಥೆಗಳು

**ಅಪೂರ್ವ ದೇಶ್‌ಪಾಂಡೆ; ಅನು: ಕಾಂಚನಲತಾ**

ಬೆಳಕೆಂದರೆ ದೈವಾನುಗ್ರಹ. ಬೆಳಕೆಂದರೆ ಪ್ರೀತಿ. ಬೆಳಕೆಂದರೆ ಗುಣಪಡಿಸುವ ಸ್ಪರ್ಶ. ಸುಂದರವಾದ ಎಲ್ಲಾ ವಸ್ತುಗಳೂ ಬೆಳಕು! ಬೆಳಕು ಸ್ಪರ್ಶಿಸಿದ ಸಜೀವವಾಗಿರುವ ಮತ್ತು ನಿರ್ಜೀವವಾಗಿರುವ ಎರಡೂ ಅಸ್ತಿತ್ವಗಳ ನೈಜ ಅನುಭವಗಳನ್ನು ನಾನು ನಮ್ರತೆಯಿಂದ ನಿಮ್ಮ ಮುಂದೆ ಪ್ರಸ್ತುತ ಪಡಿಸುತ್ತೇನೆ.

ನಿಂಬೆ ಮರ: ನನ್ನ ದೇಹವು ವಾಸಿಯಾಗದ ಯಾವುದೋ ಖಾಯಿಲೆಗೆ ತುತ್ತಾಗಿತ್ತು. ಖಾಯಿಲೆಯು ನನ್ನ ಜೀವಸತ್ವವನ್ನೆಲ್ಲಾ ಹೀರಿದ್ದರಿಂದ, ನನ್ನ ದೇಹವು ನೆಲದ ಕಡೆಗೆ ಬಾಗಿತ್ತು. ನನ್ನ ಕುಟುಂಬವು ಎಲ್ಲ ರೀತಿಯ ಔಷಧಗಳಿಂದ ನನ್ನನ್ನು ಗುಣಪಡಿಸಲು ಪ್ರಯತ್ನಿಸಿದರು; ಆದರೆ ಯಾವುದೇ ಪ್ರಯೋಜನವಾಗಲಿಲ್ಲ. ಆನಂತರ ಅವರು ಪ್ರತಿ ದಿನ ಬೆಳಕು ಮತ್ತು ಪ್ರೀತಿಯನ್ನು ನನಗೆ ಕಳುಹಿಸಲು ನಿರ್ಧರಿಸಿದರು. ಕೆಲವು ದಿನಗಳ ಕಾಲ ಯಾವ ಬದಲಾವಣೆಯೂ ಆಗಲಿಲ್ಲ, ಆದರೆ, ಕಾಲಕ್ರಮೇಣ, ಪವಾಡವಾದಂತೆ ನಾನು ಚೇತರಿಸಿಕೊಳ್ಳತೊಡಗಿದೆ. ಖಾಯಿಲೆಯಿಂದ ಕಾಂಡಕ್ಕೆ ತಗುಲಿದ್ದ ಸೋಂಕು ಕ್ರಮೇಣವಾಗಿ ಮಾಯವಾಗತೊಡಗಿತು. ನನ್ನ ಕೊಂಬೆಗಳು ಭವ್ಯವಾದ ಹಸಿರಿನ ಛಾಯೆಯ ಎಳೆಯ ಎಲೆಗಳಿಂದ ಮತ್ತೆ ಚಿಗುರತೊಡಗಿದವು. ಕೆಲವು ತಿಂಗಳುಗಳ ನಂತರ, ನನ್ನ ದೇಹದ ಮೇಲಿದ್ದ ಖಾಯಿಲೆಯು ಸಂಪೂರ್ಣವಾಗಿ ಕಣ್ಮರೆಯಾಯಿತು. ನನ್ನ ದೇಹ ಮತ್ತೆ ಇನ್ನೆಂದೂ ನೆಲಕ್ಕೆ ಬಾಗಲಿಲ್ಲ ಹಾಗೂ ಕೇವಲ ಕಳೆದ ವಾರವಷ್ಟೇ ನನ್ನ ಕೊಂಬೆಗಳು ಹೊಳೆಯುವ ಹಸಿರು ಮತ್ತು ಹಳದಿ ಬಣ್ಣಗಳ ನಿಂಬೆಹಣ್ಣುಗಳಿಂದ ತುಂಬಿದ್ದವು!

ಮಿಸ್ಟರ್ ಬ್ಲಾಕೀ: ನಾನು ಮರಿಯಾಗಿದ್ದಾಗ, ನನಗೆ ಒಂದು ಸುಂದರವಾದ ಹೊಳೆಯುವ ಕಪ್ಪು ಬಣ್ಣದ ಹೊದಿಕೆಯಿತ್ತು ಮತ್ತು ಅದರಿಂದಲೇ ನನಗೆ ಆ ಹೆಸರು ಬಂದಿತು. ಅಲೆಮಾರಿಯಾಗಿರುವುದು ಸುಲಭವಲ್ಲ, ಅದೇ ನಾಯಿಯ ಜೀವನ ಎಂದು ಧಾರಾಳವಾಗಿ ಹೇಳಬಹುದು! ತೀರಾ ಇತ್ತೀಚೆಗೆ ಒಂದು ಚರ್ಮದ ವ್ಯಾಧಿಯಿಂದ ಹೆಣಗಾಡುತ್ತಿದ್ದೆ. ಕಳೆದ ಕೆಲವು ವಾರಗಳಿಂದ ನನ್ನ ಚರ್ಮವನ್ನು ಅತಿಯಾಗಿ ಕೆರೆದುಕೊಂಡುದರ ಪರಿಣಾಮವಾಗಿ ತುಂಬಾ ರಕ್ತಸ್ರಾವವಾಯಿತು. ಒಂದು ದಿನ ನಾನು ಅತೀವವಾದ ಯಾತನೆಯಲ್ಲಿದ್ದೆ. ಒಂದು ಮೂಲೆಯಲ್ಲಿ ನರಳುತ್ತಾ ಮಲಗಿರುವಾಗ, ನನ್ನ ಮಾನವ ಸ್ನೇಹಿತನೊಬ್ಬ ಪಕ್ಕದಿಂದ ಹಾದು ಹೋದ. ನನ್ನ ಅವಸ್ಥೆಯನ್ನು ನೋಡಿದ ಕೂಡಲೇ ನನಗೆ ಅಪಾರವಾದ ಪ್ರೀತಿ ಮತ್ತು ಬೆಳಕನ್ನು ಕೆಲವು ನಿಮಿಷಗಳ ಕಾಲ ಕಳುಹಿಸಿದ. ನನ್ನ ಅರಿವಿಗೆ ಬರುವ ಮೊದಲೇ, ನನ್ನ ನರಳಾಟ ನಿಂತಿತು! ಅತಿ ಶೀಘ್ರದಲ್ಲಿ ನನ್ನ ನೋವಿನ ತೀವ್ರತೆ ಕಡಿಮೆಯಾಯಿತು. ನಾನು ನನ್ನ ಬಾಲವನ್ನು ಅಲ್ಲಾಡಿಸುತ್ತಾ, ಕೃತಜ್ಞತೆಯನ್ನು ಸಲ್ಲಿಸಲು ಆ ಮಾನವ ಸ್ನೇಹಿತನ ಕಣ್ಣಲ್ಲಿ ಕಣ್ಣಿಟ್ಟು ನೋಡಿದೆ.

ಕಾರು: ನಾನು ಜನರನ್ನು ತಿರುಗಾಡಿಸಲೆಂದೇ ರಚಿಸಲ್ಪಟ್ಟಿರುವವನು, ಆದರೆ ನನ್ನ ಊರಿನ ಗುಂಡಿ ತುಂಬಿದ ರಸ್ತೆಗಳ ಮೇಲೆ ಓಡಾಡಲು ಇಷ್ಟವಾಗದೇ ಇದ್ದರೆ, ನನ್ನನ್ನು ಹೊಣೆ ಮಾಡಬಹುದೆ? ಅದೇನೇ ಇದ್ದರೂ, ನನ್ನ ಮಾನವ ಚಾಲಕ ಸ್ನೇಹಿತನ ಜೊತೆ ಸಮಯ ಕಳೆಯುವುದನ್ನು ನಾನು ಇಷ್ಟ ಪಡುತ್ತೇನೆ, ಆತ ನನ್ನನು ತನ್ನ ಸ್ವಂತದವನಂತೆ ಪ್ರೀತಿಸುತ್ತಾನೆ. ಕಾರು ಚಲಾಯಿಸುವಾಗ ನಾವಿಬ್ಬರೂ ಒಟ್ಟಿಗೇ ಬಹಳಷ್ಟು ಸಂಗೀತವನ್ನು ಆಲಿಸುತ್ತೇವೆ.

ಒಂದೆರಡು ವಾರಗಳ ಹಿಂದೆ, ನಾವಿಬ್ಬರೂ ಪ್ರೀತಿಸುವ ಹಾಡೊಂದನ್ನು ಗುನುಗುನಿಸುತ್ತಾ ಕಾರು ಚಲಾಯಿಸುತ್ತಿದ್ದಾಗ, ಜೋರಾಗಿ ಗುದ್ದಿದ ಶಬ್ದ ಬಂತು. ನಾವು ನೋಡದ ಒಂದು ದೊಡ್ಡ ಹೊಂಡದಲ್ಲಿ ಕಾರನ್ನು ಚಲಾಯಿಸಿದ್ದೆವು. ನನ್ನ ಟೈರಿಗೆ ತೂತಾಗಿದೆ ಎಂದು ನನ್ನ ಸ್ನೇಹಿತನಿಗೆ ಖಾತ್ರಿಯಾಯಿತು ಮತ್ತು ಗಾಬರಿಯಾಗತೊಡಗಿದ, ಆದರೆ ಒಂದೇ ಕ್ಷಣದಲ್ಲಿ ಎಚ್ಚೆತ್ತುಕೊಂಡು ತಕ್ಷಣ ನನಗೆ ಪ್ರೀತಿ ಮತ್ತು ಬೆಳಕನ್ನು ಕಳುಹಿಸಿದ. ಹೆಚ್ಚು ಜಾಗ್ರತೆ ವಹಿಸದೇ ಇದ್ದುದಕ್ಕಾಗಿ ಕ್ಷಮೆ ಕೋರಿದ. ಆಗಿರಬಹುದಾದ ಹಾನಿಯನ್ನು ಅಂದಾಜು ಮಾಡಲು ಹೊರಗೆ ಬಂದು ನೋಡಿದಾಗ, ನಮ್ಮ ಸಮಾಧಾನಕ್ಕೆ, ನನ್ನ ಟೈರು ಸರಿಯಾಗಿಯೇ ಇತ್ತು. ನನ್ನ ಸ್ನೇಹಿತ ತನ್ನ ಕಣ್ಣನ್ನು ತಾನೇ ನಂಬದಾದ, ನನಗೂ ನಂಬಲಾಗಲಿಲ್ಲ! ಏನಾದರೂ ಹಾನಿಗಳಾಗಿವೆಯೇ ಎಂದು ನೋಡಲು ತನ್ನ ಇನ್ನೊಬ್ಬ ಮಾನವ ಸ್ನೇಹಿತನನ್ನು ಕರೆದ. ನಿಚ್ಚಳವಾಗಿಯೂ ಯಾವುದೇ ರೀತಿಯ ಹಾನಿಯಾಗಿಲ್ಲವೆಂದು ಆ ಸ್ನೇಹಿತ ನಮಗೆ ಹೇಳಿದ. ನನ್ನ ಸ್ನೇಹಿತ ತನಗೆ ದೊರೆತ ಎಲ್ಲಾ ಸಹಾಯಕ್ಕೆ ಬೆಳಕಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಾ ಕಾರನ್ನು ಮುನ್ನಡೆಸಿದ. ಈ ಬಾರಿ ಸ್ವಲ್ಪ ಎಚ್ಚರಿಕೆಯಿಂದ ಕಾರು ಚಲಾಯಿಸಿದೆವು.

## ಲೈಟ್ ಚಾನಲಿಂಗ್ ಕೇಂದ್ರಗಳು


ನಮ್ಮ ಯಾವುದಾದರೊಂದು ಲೈಟ್ ಚಾನಲಿಂಗ್ ಕೇಂದ್ರದಲ್ಲಿ ವಾರಕ್ಕೆ ಒಮ್ಮೆ ಲೈಟ್ ಚಾನಲ್ ಮಾಡಲು ದಯವಿಟ್ಟು ನಮ್ಮ ಜೊತೆಗೂಡಿ ಹಾಗೂ ಶಾಂತಿ ಮತ್ತು ಪ್ರೀತಿಯ ಕಂಪನಗಳನ್ನು ಹರಡಲು ಮತ್ತು ಬಲಗೊಳಿಸಲು ಸಹಾಯಮಾಡಿ. ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿ–ಕೊಳ್ಳಬಹುದು.

**ಸೋಲಾಪೂರ್**
**ಪ್ರತಿದಿನ (ಸಂಜೆ 7 – 7:30)**
ಬಾಲಗಣೇಶ್ ಮಂದಿರ, ಬುಶರ್ ಪೇಠ್
ಮೊಹೋಲ್
ದೂ. 09860967066 ಶ್ರೀ ವಿವೇಕಾನಂದ ಸ್ವಾಮಿ
09970800279 ಶ್ರೀಮತಿ ಸ್ವರೂಪ ಸ್ವಾಮಿ

**ಚೆನ್ನೈ**
**ಭಾನುವಾರ (ಬೆಳಿಗ್ಗೆ 10 –10:30)**
ನಂ. 481, ಸಾಯಿಪ್ರೇಮ್, 19 ನೇ ರಸ್ತೆ
4 ನೇ ಸೆಕ್ಟರ್, ಕೆ. ಕೆ. ನಗರ
ದೂ. 9444880409
ಶ್ರೀಮತಿ ರಾಜಲಕ್ಷ್ಮಿ ಆರ್

**ಪುಣೆ**
**ಭಾನುವಾರ (ಸಂಜೆ 4 – 4:30)**
3 ಬಿ, ಕಪಿಲ ಹೌಸಿಂಗ್ ಸೊಸೈಟಿ
ಗೋಖಲೆನಗರ, ಪುಣೆ–411016
ದೂ. 9011038169
ಶ್ರೀ ಆಶುತೋಶ್ ನವನ್‌ಗುಲ್

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.



## ಲೈಟ್ ಚಾನಲಿಂಗ್ ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಸುಜಾತ ರಾಮರಾವ್**

ಲೈಟ್ ಚಾನಲ್ ಮಾಡುತ್ತಿರುವ ಸಮಯದಲ್ಲಿ ನನ್ನಿಂದ ಬೆಳಕು ಹರಡುತ್ತಿರುವಾಗ, ನನಗೆ ಕಲಿಯುವುದಕ್ಕೆ ಸಹಾಯ ಮಾಡುವಂತೆ ಬೆಳಕನ್ನು ಪ್ರಾರ್ಥಿಸಿದೆ. ಅದು ನಾನು ಹೇಳಿದ್ದನ್ನು ಕೇಳಿಸಿಕೊಂಡು ನನಗೆ ಆಶೀರ್ವಾದ ಮಾಡಿದಂತೆ ಅನಿಸಿತು.

–ನವೀನ್ ಸಿ, 6ನೇ ತರಗತಿ,
ಶ್ರೀ ಸಾಯಿ ಪಬ್ಲಿಕ್ ಸ್ಕೂಲ್, ಬೆಂಗಳೂರು

ಲೈಟ್ ಚಾನಲ್ ಮಾಡಲು ಕಣ್ಣುಗಳನ್ನು ಮುಚ್ಚಿದಾಗ, ನಾನು ಭೂಮಿಯ ಮೇಲೆ ಕುಳಿತುಕೊಂಡಿರುವಂತೆ ಮತ್ತು ಬೆಳಕು ಎಲ್ಲೆಡೆ ಹರಡುತ್ತಿರುವಂತೆ ಅನಿಸಿತು. ಬೆಳಕಿನಿಂದ ತುಂಬಿದ ಭೂಮಿಯನ್ನು ನಾನು ನೋಡಿದೆ.

–ಸೌಮ್ಯ ಎಸ್, 6ನೇ ತರಗತಿ,
ಶ್ರೀ ಸಾಯಿ ಪಬ್ಲಿಕ್ ಸ್ಕೂಲ್, ಬೆಂಗಳೂರು

ನಾನು ಲೈಟ್ ಚಾನಲ್ ಮಾಡಲು ಕಣ್ಣುಗಳನ್ನು ಮುಚ್ಚಿದಾಗ, ತುಂಬಾ ನರಳುತ್ತಿದ್ದ ನನ್ನ ಸ್ನೇಹಿತೆಗೆ ಸಹಾಯ ಮಾಡುವಂತೆ ಹಾಗೂ ಜನರ ಮನಸ್ಸಿನಿಂದ ನಕಾರಾತ್ಮಕ ಭಾವನೆಗಳನ್ನು ತೆಗೆದು ಹಾಕಿ, ಅವರು ಒಳ್ಳೆಯವರಾಗಿ ಪ್ರಶಾಂತತೆಯಿಂದಿರಲು ಸಹಾಯ ಮಾಡುವಂತೆ ಬೆಳಕನ್ನು ಪ್ರಾರ್ಥಿಸಿದೆ. ನನಗಾಗಿ ಹಾಗೂ ನನ್ನ ಪೋಷಕರಿಗಾಗಿ ನಾನು ಚೆನ್ನಾಗಿ ಓದಬೇಕೆಂದು ಪ್ರಾರ್ಥಿಸಿದೆ. ಪ್ರತಿದಿನ ಹಾಗೂ ಪರೀಕ್ಷೆಯ ಸಮಯದಲ್ಲಿ ಕೂಡ ಈ ತಂತ್ರವನ್ನು ಅಭ್ಯಾಸ ಮಾಡುತ್ತೇನೆ.

–ನಿಷಾರಿಕ ಎಸ್, 7ನೇ ತರಗತಿ,
ಶ್ರೀ ಸಾಯಿ ಪಬ್ಲಿಕ್ ಸ್ಕೂಲ್, ಬೆಂಗಳೂರು

ನಾನು ಲೈಟ್ ಚಾನಲ್ ಮಾಡಲು ಕಣ್ಣು ಮುಚ್ಚಿದಾಗ, ನನಗೆ ಬಹಳ ಚೆನ್ನಾಗಿದೆಯೆನಿಸಿತು. ಕಣ್ಣುಗಳನ್ನು ತೆರೆದಾಗ, ಒಂದು ಹೊಸ ಪ್ರಪಂಚದಲ್ಲಿದ್ದಂತೆ ಭಾಸವಾಯಿತು.

–ಅಶ್ವಿನಿ ಎಲ್, 8ನೇ ತರಗತಿ,
ಶ್ರೀ ಸಾಯಿ ಪಬ್ಲಿಕ್ ಸ್ಕೂಲ್, ಬೆಂಗಳೂರು

ಲೈಟ್ ಚಾನಲ್ ಮಾಡುವಾಗ, ಬೆಳಕಿನಿಂದ ತುಂಬಿದ ಮರದ ಕೆಳಗೆ ನಾನು ಇದ್ದು ತುಂಬಾ ಆಳವಾಗಿ ಧ್ಯಾನ ಮಾಡುತ್ತಿದ್ದೆ ಎಂದೆನಿಸಿತು. ಬೆಳಕು ನನ್ನೊಳಗೆ ಹಾದುಹೋಗುತ್ತಿರುವಾಗ, ನನ್ನ ಕೈಯಲ್ಲಿ ಬೆಳಕಿನ ಚೆಂಡನ್ನು ಊಹಿಸಿಕೊಂಡು ಜ್ವರದಿಂದ ನರಳುತ್ತಿದ್ದ ನನ್ನ ಸಹೋದರನಿಗೆ ಕಳುಹಿಸಿದೆ. ನಂತರ ಇಡೀ ಪ್ರಪಂಚಕ್ಕೆ ಹರಡಿದೆ.

–ವಿಶಾಲ್, 8ನೇ ತರಗತಿ,
ಶ್ರೀ ಸಾಯಿ ಪಬ್ಲಿಕ್ ಸ್ಕೂಲ್, ಬೆಂಗಳೂರು

ಲೈಟ್ ಚಾನಲ್ ಮಾಡುವಾಗ ಬೆಳಕು ನನ್ನೊಳಗೆ ಪ್ರವೇಶಿಸಿ ಇಡೀ ಭೂಮಿಗೆ ಹರಡುತ್ತಿರುವುದರ ಅನುಭವವಾಯಿತು. ನನಗೆ ಓದಲು ಸಹಾಯ ಮಾಡುವಂತೆ ಮತ್ತು ಒಳ್ಳೆಯ ಆರೋಗ್ಯ ಕೊಡುವಂತೆ ಅದನ್ನು ಪ್ರಾರ್ಥಿಸಿದೆ. ನನ್ನ ಪೋಷಕರು ಮತ್ತು ಸಹೋದರಿಯನ್ನು ಬೆಳಕಿಗೆ ಪರಿಚಯಿಸಿದೆ ಹಾಗೂ ನನ್ನ ಭಾವನೆಗಳನ್ನು, ನನ್ನ ವೈಯಕ್ತಿಕ ಮಾಹಿತಿಗಳನ್ನು ಮತ್ತು ನನ್ನ ಸಮಸ್ಯೆಗಳನ್ನು ಕೂಡ ಅದರೊಂದಿಗೆ ಹಂಚಿಕೊಂಡೆ.

–ಶ್ವೇತ ವಿ, 6ನೇ ತರಗತಿ,
ಶ್ರೀ ಸಾಯಿ ಪಬ್ಲಿಕ್ ಸ್ಕೂಲ್, ಬೆಂಗಳೂರು

ಲೈಟ್ ಚಾನಲ್ ಮಾಡಲು ಕಣ್ಣುಗಳನ್ನು ಮುಚ್ಚಿದಾಗ, ನನಗೆ ಬಹಳ ಸಂತೋಷವಾಯಿತು. ನಾನು ಚೆನ್ನಾಗಿ ಓದಿ ಮೊದಲನೆಯ ಶ್ರೇಣಿ ಪಡೆಯಬೇಕೆಂದು ಬೆಳಕನ್ನು ಪ್ರಾರ್ಥಿಸಿದೆ. ಬೆಳಕು ಹರಡುತ್ತಿರುವಾಗ, 'ಇನ್ನೂ ಹೆಚ್ಚಾಗಿ ಓದು, ಆಗ ಬೇರೆಯವರಂತೆ ನಿನಗೂ ಮೊದಲನೆಯ ಶ್ರೇಣಿ ದೊರಕುತ್ತದೆ' ಎಂದು ಬೆಳಕು ನನ್ನ ಮನಸ್ಸಿನಲ್ಲಿ ಎಲ್ಲಿಯೋ ಹೇಳಿದಂತೆ ಭಾಸವಾಯಿತು

–ಸಂಗೀತಾ ಪಿ, 6ನೇ ತರಗತಿ,
ಶ್ರೀ ಸಾಯಿ ಪಬ್ಲಿಕ್ ಸ್ಕೂಲ್, ಬೆಂಗಳೂರು

ಲೈಟ್ ಚಾನಲಿಂಗ್ ನಂತರ, ನಾನು ಬಹಳ ಶಾಂತಿ ಮತ್ತು ಸಮಾಧಾನದಿಂದಿದ್ದೆ.

–ಜಾನುಶ್ರೀ ಎಸ್, 6ನೇ ತರಗತಿ,
ಶ್ರೀ ಸಾಯಿ ಪಬ್ಲಿಕ್ ಸ್ಕೂಲ್, ಬೆಂಗಳೂರು

### ಶಾಲೆಗಳಿಗೊಂದು ಮನವಿ

ನಿಮ್ಮ ಆನ್‌ಲೈನ್ ತರಗತಿಗಳ (online classes) ಪ್ರಾರಂಭದಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯ 3–7 ನಿಮಿಷಗಳ ಕಾಲ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ.

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ) ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು–560077 ಮಾಲೀಕರು; ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು – 560077, ಸಂಪಾದಕರು: ಶ್ರೀದೇವಿ